ಸಾಕ್ಷಿಯನ್ನು ದಿಃ 04.03.2024 ರಂದು ಕರೆಸಿ ಪ್ರಮಾಣೀಕರಿಸಲಾಯಿತು

ಪಾಟೀಸವಾಲು 2ನೇಪ್ರತಿವಾದಿ ಪರ ಶ್ರೀ ಎಸ್ ಎಸ್ ಕೆ ವಕೀಲರಿಂದಃ

ದಾವಸ್ವತ್ತಿನ ಖಾತೆ ನಂಬರ್ 73 ಇರುತ್ತದೆ. ಸದರಿ ಆಸ್ತಿಯ ವಿಸ್ತೀರ್ಣ ಪೂರ್ವ ಪಶ್ಚಿಮ 53 ಅಡಿ ಉತ್ತರ ದಕ್ಷಿಣ 53 ಅಡಿ ಇರುತ್ತದೆ. ಸದರಿ ಆಸ್ತಿ ಮೂಲತಃ ನನ್ನ ಅಜ್ಜಿ ನಾರಾಯಣಮ್ಮ ರವರಿಗೆ ಸೇರಿದ ಆಸ್ತಿಯಾಗಿರುತ್ತದೆ. ಸದರಿ ನಾರಾಯಣಮ್ಮರವರಿಂದ ಮೇಲ್ಕಂಡ ಆಸ್ತಿಯನ್ನು ನನ್ನ ತಂದೆ ಬೀಮಣ್ಣ ರವರು ಖರೀದಿ ಮಾಡಿರುತ್ತಾರೆ. ಸದರಿ ಪತ್ರದಲ್ಲಿನ ಖಾತೆ ನಂಬರ್ 73 ರ ಆಸ್ತಿಯ ವಿಸ್ತೀರ್ಣ ಪೂರ್ವ ಪಶ್ಚಿಮ 53 ಅಡಿ ಉತ್ತರ ದಕ್ಷಿಣ 53 ಅಡಿ ಇರುತ್ತದೆ. ಖಾತೆ ನಂಬರ್ 74 ರ ಆಸ್ತಿಯ ವಿಸ್ತೀರ್ಣ ಎಷ್ಟಿದೆ ಎಂದರೆ ಸಾಕ್ಷಿಯು ಖಾತಾ ನಂಬರ್ 73, 74 ಎರಡೂ ಸೇರಿ ಮೇಲೆ ಹೇಳಿದ ವಿಸ್ತೀರ್ಣ ಇದೆ ಎಂದು ನುಡಿಯುತ್ತಾರೆ. ಖಾತಾ ನಂಬರ್ 73, 74 ಕ್ಕೂ ಎರಡು ಖಾತೆ ಸಂಖ್ಯೆಗಳಿಗೆ ಪ್ರತ್ಯೇಕ ಕ್ರಯಪತ್ರಗಳಾಗಿವೆ ಎಂದರೆ ಸರಿ.

ದಾವಸ್ವತ್ತು ಈಗ ಬೀಡು ಜಾಗ ಇರುತ್ತದೆ. ದಾವಸ್ವತ್ತಿನ ಕುರಿತು ನನ್ನ ತಂದೆ ಈ ಮೊದಲು ಒಂದು ಪ್ರಕರಣ ದಾಖಲಿಸಿದ್ದರು ಎಂದರೆ ಸರಿ. ಸದರಿ ಪ್ರಕರಣ ವಜಾ ಆಗಿದೆ ಎಂದರೆ ಸರಿ. ಮೊದಲು ಅಪೀಲ್ ವಜಾ ಆಗಿದೆ ಎಂದರೆ ಸರಿ. 2ನೇ ಅಪೀಲ್ ನಲ್ಲಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ನಮ್ಮಂತೆ ಆದೇಶವಾಗಿರುತ್ತದೆ. ಸದರಿ ಆದೇಶವು 1998 ರಲ್ಲಿ ಆಗಿರುತ್ತದೆ ಎಂದರೆ ಸರಿ. 1999 ರಲ್ಲಿ 2ನೇಪ್ರತಿವಾದಿ ಮತ್ತು ಅವರ ಕುಟುಂಬದವರು ಸೇರಿ ನನ್ನ ತಂದೆ ಮತ್ತು ವೇಣುಗೋಪಾಲ್ ರವರ ವಿರುದ್ದ ಪ್ರಕರಣ ದಾಖಲಿಸಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ದಾವೆ ವೇಣುಗೋಪಾಲ್ ರವರ ವಿರುದ್ದ ವಜಾ ಆಗಿದೆ ಎಂದು ನುಡಿಯುತ್ತಾರೆ.

2ನೇಪ್ರತಿವಾದಿಯ ಆಸ್ತಿಯ ಖಾತೆ ಸಂ 90 ಎಂದರೆ ಸರಿ. ಸದರಿ ಆಸ್ತಿ ವಿಸ್ತೀರ್ಣ ಪೂರ್ವ ಪಶ್ಚಿಮ 53 ಅಡಿ ಉತ್ತರ ದಕ್ಷಿಣ 53 ಅಡಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ ವಿಸ್ತೀರ್ಣದ ಆಸ್ತಿಯು 2ನೇಪ್ರತಿವಾದಿ ಸೇರಿದ್ದು ಎಂದು ಸಿವಿಲ್ ದಾವೆಯಲ್ಲಿ ಆದೇವಾಗಿದ ಎಂದರೆ ಸರಿಯಲ್ಲ. ಸದರಿ ಆದೇಶದ ವಿರುದ್ದ ನನ್ನ ತಂದೆ ಆರ್ ಎ ನಂ 44/2004 ರಂತೆ ಅಪೀಲ್ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಅಪೀಲ್ ವಜಾ ಆಗಿದೆ ಎಂದರೆ ಸರಿ. ಸದರಿ ಆದೇಶದ ವಿರುದ್ದ ನನ್ನ ತಂದೆ ನಂತರ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಅಪೀಲ್ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಅಪೀಲ್ ಕೂಡ ವಜಾ

ಆಗಿದೆ ಎಂದರೆ ನನಗೆ ಗೊತ್ತಿಲ್ಲ. ದಾವಸ್ವತ್ತು ನಾನು ಹೇಳಿದಂತೆ ಅಸ್ತಿತ್ವದಲ್ಲಿರುವುದಿಲ್ಲ, ಸದರಿ ಆಸ್ತಿಯು ಖಾತೆ ಸಂ 90 ಕ್ಕೆ ಸೇರಿದ ಆಸ್ತಿಯಾಗಿದ್ದು, ನನ್ನ ತಂದೆಗೆ ಮಾರಾಟ ಮಾಡಿದ ನಾರಾಯಣಮ್ಮ ರವರಿಗೆ ಸದರಿ ಆಸ್ತಿ ಯಾವತ್ತೂ ಸೇರಿರಲಿಲ್ಲ ಎಂದರೆ ಸರಿಯಲ್ಲ. ಖಾತೆ ಸಂ 73, 74 ರ ಆಸ್ತಿಯು 1969 ರಿಂದ 1990 ರವರೆಗೆ ಸುಂದರಿಪಾಪ ಎಂಬುವವರ ಹೆಸರಿನಲ್ಲಿ ಬರುತ್ತಿತ್ತು ಎಂದರೆ ಸರಿಯಲ್ಲ. ಮೇಲ್ಕಂಡ ದಾವೆ ಮತ್ತು ಆಪೀಲ್ ಗಳಲ್ಲಿ ಸದರಿ ಸ್ವತ್ತು ಸುಂದರಿ ಪಾಪ ರವರಿಗೆ ಸೇರಿದ್ದು ಎಂದು ಆದೇಶವಾಗಿದೆ ಎಂದರೆ ಸರಿಯಲ್ಲ. 1985 ರಲ್ಲಿ ಮೇಲ್ಕಂಡ ಆಸ್ತಿಗಳ ಖಾತೆಯು ನಾರಾಯಣಮ್ಮ ರವರ ಹೆಸರಿನಲ್ಲಿ ಇರಲಿಲ್ಲ, ಆ ಕಾರಣದಿಂದ ಅವರು ನನ್ನ ತಂದೆಗೆ ಮಾರಾಟ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ದಾಖಲಾತಿಗಳು ಅವರ ಹೆಸರಿನಲ್ಲಿ ಇಲ್ಲದೇ ಇದ್ದರೂ ನನ್ನ ತಂದೆ ಮತ್ತು ನಾರಾಯಣಮ್ಮ ರವರು ಸೇರಿ ಸದರಿ ದಾಖಲಾತಿಗಳನ್ನು ಸೃಷ್ಟಿ ಮಾಡಿದ್ದಾರೆಂದರೆ ಸರಿಯಲ್ಲ.

ಖಾತಾ ನಂ 90 2ನೇಪ್ರತಿವಾದಿಗೆ ಸೇರಿದ ಆಸ್ತಿಯಾಗಿದ್ದು ಸದರಿ ಆಸ್ತಿಯ ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡು ನಾನು ಈ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ದಾವಸ್ವತ್ತಿನ ಕುರಿತು ಕಂದಾಯ ಪಾವತಿ ಮಾಡುತ್ತಿದ್ದೇನೆ. ಈ ಕುರಿತು ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. 1985 ರಿಂದ 2019 ರವರೆಗೆ ದಾವಸ್ವತ್ತಿನ ಕುರಿತು ದಾಖಲಾತಿಗಳು ನನ್ನ ತಂದೆ ಹೆಸರಿಗೆ ಬರುತ್ತಿದ್ದ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ನಮ್ಮ ತಂದೆ ಇಟ್ಟಿದ್ದ ದಾಖಲಾತಿಗಳನ್ನು ವಕೀಲರ ಬಳಿ ನೀಡಿರುತ್ತೇನೆಂದು ನುಡಿಯುತ್ತಾರೆ. ಅಂತಹ ಯಾವುದೇ ದಾಖಲಾತಿ ಇರುವುದಿಲ್ಲ ಮತ್ತು ನಾನು ಅಂತಹ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ನಿಪಿ1 ಕ್ರಯಪತ್ರದಲ್ಲಿ ಖಾತೆ ಸಂ 74 ರ ವಿಸ್ತೀರ್ಣ ಪೂರ್ವ ಪಶ್ಚಿಮ 50 ಅಡಿ ಉತ್ತರ ದಕ್ಷಿಣ 45 ಅಡಿ ಎಂದು ನಮೂದು ಇದೆ ಎಂದರೆ ಸರಿ. ನಿಪಿ2 ಕ್ರಯಪತ್ರದಲ್ಲಿ ಖಾತೆ ಸಂ 73 ರ ವಿಸ್ತೀರ್ಣ ಪೂರ್ವ ಪಶ್ಚಿಮ 53 ಅಡಿ ಉತ್ತರ ದಕ್ಷಿಣ 8 ಅಡಿ ಎಂದು ನಮೂದು ಇದೆ ಎಂದರೆ ಸರಿ. ನಿಪಿ1, 2 ರಂತೆ ನನ್ನ ತಂದೆ ಕ್ರಯಕ್ಕೆ ಪಡೆದ ನಂತರ ಅವುಗಳ ಕುರಿತು ಖಾತೆಯನ್ನು ಪ್ರತ್ಯೇಕವಾಗಿ ಮಾಡಿಸಿದ್ದಾರಾ ಎಂದರೆ ಸಾಕ್ಷಿಯು ಒಂದೇ ಖಾತೆ ಮಾಡಿಸಿರುತ್ತಾರೆಂದು ನುಡಿಯುತ್ತಾರೆ.

ಮೇಲೆ ಹೇಳಿದ ಪ್ರತ್ಯೇಕ ವಿಸ್ತೀರ್ಣ ಕುರಿತು ನಾನು ಹಾಜರುಪಡಿಸಿದ ಪಂಚಾಯ್ತಿಯವರು ನೀಡಿದ ದಾಖಲಾತಿಗಳಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ8 ರಲ್ಲಿ ಖಾತಾ ಸಂ 74 ನಮೂದು ಇಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಖಾತೆ ಸಂ 73 ಕ್ಕೆ ಮಾಡಿರುತ್ತಾರೆಂದು ನುಡಿಯುತ್ತಾರೆ. ಖಾತಾ ಸಂ 73, 74 ಅನ್ನು ಒಟ್ಟುಗೂಡಿಸಿದ್ದು ಯಾವ ವರ್ಷದಲ್ಲಿ ಎಂದು ನನಗೆ ನೆನಪಿಲ್ಲ. ಅಂತಹ ಯಾವುದೇ ಖಾತೆ ಇಲ್ಲದೇ ಇದುದ್ದರಿಂದ ಆ ಕಾರಣದಿಂದ ಯಾವುದೇ ಖಾತೆ ಮಾಡಿರುವುದಿಲ್ಲ, ಅಂತಹ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಸ್ವತ್ತಿನಲ್ಲಿ ಹೇಳಿದಂತಹ ನಮಗೆ ಸೇರಿದ ಯಾವುದೇ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ.

ಈ ದಾವೆಯಲ್ಲಿ ದಾವಸ್ವತ್ತು ಎರಡು ಕ್ರಯಪತ್ರದ ಮೂಲಕ ಪ್ರತ್ಯೇಕ ಖಾತೆ ಸಂ ಮತ್ತು ವಿಸ್ತೀರ್ಣದಂತೆ ಬಂದಿರುತ್ತದೆಂದು ಹೇಳಿರುತ್ತೇನೆ. ಈ ದಾವೆಯಲ್ಲಿ 2ನೇಪ್ರತಿವಾದಿ ಏನು ತಕರಾರು ಸಲ್ಲಿಸಿದ್ದಾರೆಂದು ನನಗೆ ಗೊತ್ತಿಲ್ಲ. 1ನೇಪ್ರತಿವಾದಿ ನನ್ನ ಮತ್ತು 2ನೇಪ್ರತಿವಾದಿ ವಿರುದ್ದ ಒಎಸ್ ನಂ 171/2009 ರಂತೆ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ನ್ಯಾಯಾಲಯಕ್ಕೆ ಹಾಜರಾಗಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ತಂದೆಗೆ ಅನಾರೋಗ್ಯವಾಗಿದ್ದರಿಂದ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆ ವಜಾ ಆಯಿತು ಎಂದರೆ ಸರಿ. ಸದರಿ ಆದೇಶದ ವಿರುದ್ದ 1ನೇಪ್ರತಿವಾದಿ ಅಪೀಲ್ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. 2ನೇಪ್ರತಿವಾದಿಯ ಅಜ್ಜಿ ತಂಜಮ್ಮ ರವರು ಅಜ್ಮತ್ ಬಿ ಎಂಬುವವರಿಂದ ದಿಃ 27.7.1943 ರಂದು ಕ್ರಯಪತ್ರದ ಮೂಲಕ ಆಸ್ತಿ ಖರೀದಿ ಮಾಡಿರುತ್ತಾರೆಂದರೆ ಸರಿಯಲ್ಲ. ತಂಜಮ್ಮ ರವರು ಮರಣ ಹೊಂದಿದ ನಂತರ ಸದರಿ ಆಸ್ತಿಯ ಖಾತೆಯು 2ನೇಪ್ರತಿವಾದಿಯ ತಂದೆ ವೆಂಕಟೇಶ್ ರವರ ಹೆಸರಿನಲ್ಲಿ ಖಾತೆ ಆಗಿರುತ್ತದೆ ಎಂದರೆ ಸರಿಯಲ್ಲ. ಅಂದಿನಿಂದಲೂ 2ನೇಪ್ರತಿವಾದಿ ತಂದೆ ಸದರಿ ಆಸ್ತಿಯ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. ಖಾತಾ ಸಂ 90 ರ ಖಾತೆಯು ಈಗಲೂ ಕೂಡ 2ನೇಪ್ರತಿವಾದಿಯ ತಂದೆ ಹೆಸರಿನಲ್ಲಿ ಬರುತ್ತಿದೆ ಎಂದರೆ ಸರಿಯಲ್ಲ. 2ನೇಪ್ರತಿವಾದಿ ಸೇರಿದ ಆಸ್ತಿ ಖಾತೆ ಸಂ 90 ರ ಆಸ್ತಿಯ ಪೂರ್ವಕ್ಕೆ ವೆಂಕಟೇಶಪ್ಪ ರವರ ಮನೆ ಇದ್ದು ಈಗ ರಸ್ತೆ ಪಶ್ಚಿಮಕ್ಕೆ ಸರ್ಕಾರಿ ರಸ್ತೆ ಉತ್ತರಕ್ಕೆ ರಸ್ತೆ ದಕ್ಷಿಣಕ್ಕೆ ಅಪ್ಪೊಜಪ್ಪ ರವರ ಮನೆ ಈಗ ಚಾಂದ್ ರವರ ಮನೆ ಎಂದರೆ ಸರಿಯಲ್ಲ.

ದಾವಸ್ವತ್ತಿನ ಪೂರ್ವಕ್ಕೆ ಸರ್ಕಾರಿ ರಸ್ತೆ. ಪಶ್ಚಿಮಕ್ಕೆ ಜಮಾಲ್ ಸಾಬಿ ರವರ ಮನೆ ಈಗ ಶಹಜಹಾನ್ ರವರ ಮನೆ. ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಚಾಂದ್ ರವರ ಮನೆ. ದಾವೆಯಲ್ಲಿ ದಕ್ಷಿಣ ದಿಕ್ಕಿಗೆ ತೇಜುಗೌಡ ರವರ ಮನೆ ಎಂದು ತೋರಿಸಲಾಗಿದೆ ಎಂದರೆ ಸಾಕ್ಷಿಯು ಅವರಿಂದ ಚಾಂದ್ ರವರು ಖರೀದಿ ಮಾಡಿದ್ದಾರೆಂದು ನುಡಿಯುತ್ತಾರೆ. ಖಾತೆ ಸಂ 90 ರ ಆಸ್ತಿಯು ಖಾಲಿ ಜಾಗ ಇರುವುದಿಲ್ಲ ಅದರಲ್ಲಿ ತಳಪಾಯವನ್ನು 2ನೇಪ್ರತಿವಾದಿಯು ಹಾಕಿದ್ದಾರೆಂದರೆ ಸರಿಯಲ್ಲ. ಸಾಕ್ಷಿಯು ನಾನು ಹಾಕಿದ್ದೇನೆಂದು ನುಡಿಯುತ್ತಾರೆ. ದಾವೆಯಲ್ಲಿ ತಳಪಾಯ ಹಾಕಿರುವ ಬಗ್ಗೆ ಹೇಳಿದ್ದೀರಾ ಎಂದರೆ ಸಾಕ್ಷಿಯು ಈ ಕುರಿತು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2ನೇ ಪ್ರತಿವಾದಿಯ ಸ್ವತ್ತಿಗೂ ನಮಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 1943 ರಿಂದ ತಂಜಮ್ಮ ಖರೀದಿ ಮಾಡಿದ್ದು, ಅಂದಿನಿಂದಲೂ ಅವರೇ ಸ್ವಾಧೀನದಲ್ಲಿರುತ್ತಾರೆ, ನಾವು ಯಾವತ್ತೂ 2ನೇಪ್ರತಿವಾದಿಯು ತಕರಾರಿನ ಹೇಳಿರುವ ಆಸ್ತಿಯಲ್ಲಿ ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 2ನೇಪ್ರತಿವಾದಿ ಮತ್ತು ಅವರ ಕುಟುಂಬದವರು ಸಲ್ಲಿಸಿದ ದಾವೆಯು ಆದೇಶವಾದ ನಂತರ ಸದರಿ ಆದೇಶದ ವಿರುದ್ದ ನಾನು ಮತ್ತು ನಮ್ಮ ಕುಟುಂಬದವರು ಯಾವುದೇ ಅಪೀಲ್ ಸಲ್ಲಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಸ್ವತ್ತಿನ ಕುರಿತು ಈ ಮೊದಲಿನ ದಾವೆಯಲ್ಲಿ ಆದೇಶವಾಗಿರುವುದರಿಂದ ನಾನು ಈ ದಾವೆಯಲ್ಲಿ ಅದೇ ಪರಿಹಾರ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. 2ನೇಪ್ರತಿವಾದಿಗೆ ತೊಂದರೆ ಕೊಡುವ ಸಲುವಾಗಿ ಈ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು 1ನೇ ಪ್ರತಿವಾದಿಯೊಂದಿಗೆ ಶಾಮೀಲಾಗಿ ಈ ಸುಳ್ಳು ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ನಾನು ಮತ್ತು 1ನೇಪ್ರತಿವಾದಿ ಅನಾವಶ್ಯಕವಾಗಿ 2ನೇಪ್ರತಿವಾದಿಯ ವಿರುದ್ದ ಸುಳ್ಳು ದಾವೆ ಸಲ್ಲಿಸಿದ್ದೇವೆಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

(ಮಂಜುನಾಥ. ಆರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಅಪರ ಜೆ ಎಂ ಎಫ್ ಸಿ, ಕೆ ಜಿ ಎಫ್